ದಿನಾಂಕಃ 06-11-2019

ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದಃ

ನನಗೆ ಓದಲು ಮತ್ತು ಬರೆಯಲು ಬರುತ್ತದೆ. ನನಗೆ ಕಂದಾಯ ಇಲಾಖೆಯ ದಾಖಲಾತಿಯ ಬಗ್ಗೆ ಮಾಹಿತಿ ಇರುತ್ತದೆ. ದಾವೆಯನ್ನು ನಿರ್ಬಂಧಕಾಜ್ಞೆಯನ್ನು ಕೋರಿ ಸಲ್ಲಿಸಿರುತ್ತೇನೆ. ದಾವಾ ಸರ್ವೆ ನಂ.8/7 ವಿಸ್ತೀರ್ಣ 2 ಎಕರೆ 27 ಗುಂಟೆ ಇರುತ್ತದೆ. ಸದರಿ ಸ್ವತ್ತಿನ ಚೆಕ್ಕುಬಂದಿ ಹೇಳಬಲ್ಲೆ. ಪೂರ್ವಕ್ಕೆ ಮಂಜಪ್ಪ ಮತ್ತು ರಾಯಪ್ಪನವರು ಜಮೀನು, ಪಶ್ಚಿಮಕ್ಕೆ ಕೆ.ಸಿ ರಮೇಶ ಬಿನ್ ಚನ್ನಬಸಪ್ಪನವರ ಮತ್ತು ವೀರಭದ್ರಪ್ಪನವರ ಜಮೀನು, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಯು.ಎನ್. ವೀರಪ್ಪನವರ ಜಮೀನು. ಈ ಮೇಲಿನ ಚೆಕ್ಕುಬಂದಿಯೊಳಗಿನ ಜಮೀನಿನಲ್ಲಿ ಸ್ವಾಧೀನದಲ್ಲಿ ಇರುವ ಬಗ್ಗೆ ಕಂದಾಯ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಚೆಕ್ಕುಬಂದಿಯೊಳಗಿನ ಸ್ವಾಧೀನದಲ್ಲಿ ಇರುವ ಬಗ್ಗೆ ನನ್ನ ಬಳಿ ಯಾವುದೆ ದಾಖಲೆ ಇಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಮೂಲತಃ ನನ್ನ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ. ದಾವಾ ಸ್ವತ್ತು ಜುಬಾನೆ ಹಿಸ್ಸೆ ಮೂಲಕ ನನ್ನ ಭಾಗಕ್ಕೆ ಬಂದಿರುತ್ತದೆ. ಜುಬಾನೆ ಹಿಸ್ಸೆ ಮಾಡುವ ಸಮಯದಲ್ಲಿ ಸ್ವತ್ತಿನ ಚೆಕ್ಕುಬಂದಿ ನಮೂದು ಮಾಡಲಾಗಿತ್ತೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಿಶಾನೆ ಪಿ 1 ರ ಪ್ರಕಾರ ಕರಾಬನ್ನು ಹೊರತು ಪಡಿಸಿ ಎಷ್ಟು ಜಮೀನುಇದೆ ಎಂದರೆ ಸಾಕ್ಷಿಯು ಒಟ್ಟು 2 ಎಕರೆ 27 ಗುಂಟೆ ಜಮೀನು ಇದ್ದು ಅದರಲ್ಲಿ ಕರಾಬು 5 ಗುಂಟೆ ಜಮೀನು ಇದ್ದು ಅದನ್ನು ಕಳೆದು 2 ಎಕರೆ 22 ಗುಂಟೆ ಇದೆ. ನಿಶಾನೆ ಪಿ 1 ರ ಪ್ರಕಾರ ಕರಾಬನ್ನು ಹೊರತು ಪಡಿಸಿ 2 ಎಕರೆ 22 ಗುಂಟೆ ಜಮೀನು ಇದ್ದು ಅದು ನನ್ನ ಸ್ವಾಧೀನಾನುಭವದಲ್ಲಿ ಇರುತ್ತದೆ ಎಂದರೆ ಸರಿ. ನಾನು 2 ಎಕರೆ 27 ಗುಂಟೆ ಜಮೀನಿನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. 5 ಗುಂಟೆ ಕರಾಬು ಜಮೀನು ನನ್ನ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ.8/4 ರ ಜಮೀನಿನಲ್ಲಿ ರಸ್ತೆ ಮಾಡುವ ಉದ್ದೇಶದಿಂದ ಸರ್ಕಾರವು ಭೂಸ್ವಾಧೀನ ಪಡಿಸಿಕೊಂಡಿರುತ್ತದೆ ಎಂದರೆ ಸರಿಯಲ್ಲ. ಸದರಿ ಭೂಸ್ವಾದೀನದ ಸಂಬಂಧ ಸರ್ಕಾರ ಹಣವನ್ನು ನನ್ನ ತಂದೆಯವರಿಗೆ ನೀಡಿತ್ತು ಎಂದರೆ ಸಾಕ್ಷಿಯು ಹಣವನ್ನು ನಾವು ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಶಾನೆಪಿ 4 ರಿಂದ 7 ರ ದಾಖಲಾತಿಗಳು ಉಪವಿಭಾಗಾಧಿಕಾರಿಗಳ ನ್ಯಾಯಾಲಯದ ಆದೇಶಗಳಾಗಿರುತ್ತವೆ. ಸದರಿ ಆದೇಶಗಳು ರಸ್ತೆ ವಿಚಾರವಾಗಿ ಈ ಹಿಂದೆ ಮಾಡಿದ ಆದೇಶಗಳಾಗಿರುತ್ತವೆ. ಸರ್ವೆನಂ.8/4 ಈಗ ರಿಸರ್ವೆ ಆಗಿ 8/7 ಆಗಿದೆ ಎಂದರೆ ಸರಿ. ಸದರಿ ಸರ್ವೆ ನಂಬರ್ ನಲ್ಲಿ 14 ಗುಂಟೆ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಂಡಿದ್ದು ಆ ಬಗ್ಗೆ ನನ್ನ ತಂದೆ ಹಣವನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸರ್ಕಾರವು ರಸ್ತೆ ಮಾಡುವ ಉದ್ದೇಶದಿಂದ ಸರ್ವೆ ನಂ. 5,7 ರಿಂದ 9,12 ಮತ್ತು 13 ನೇ ಜಮೀನಿನಲ್ಲಿ ಸ್ವಲ್ಪ ಭಾಗವನ್ನು ಭೂಸ್ವಾಧೀನ ಪಡಿಸಿಕೊಂಡಿರುತ್ತದೆ ಎಂದರೆ ಸರಿಯಲ್ಲ. ಸರ್ಕಾರದವರು ಸದರಿ ರಸ್ತೆಯನ್ನು ಮಾಡಿದ್ದು ಅದನ್ನು ಅಕ್ರಮವಾಗಿ ವಶಕ್ಕೆ ಪಡೆದು ಅದನ್ನು ಮರೆಮಾಚುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ

ಚನ್ನಗಿರಿ